

> ಎಂಟನೇ ವಯಸ್ಸಿನಿಂದ ಬ್ಯಾಡ್ಮಿಂಟನ್ ತರಬೇತಿ ಆರಂಭಿಸಿದ ಹೈದರಾಬಾದ್‌ನ ಪಿ.ವಿ. ಸಿಂಧು, ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಜಯಿಸಿದ ಭಾರತದ ಏಕೈಕ ಆಟಗಾರ್ತಿ. ಆಗ ಪದಕ ಗೆದ್ದಾಗ ಅನೇಕ ಮಕ್ಕಳಿಗೆ ಪ್ರೇರಣೆಯಾದರು. 22 ವರ್ಷಗಳ ಹಿಂದೆ ಆರಂಭವಾದ ಅವರ ಸ್ಪರ್ಧಾತ್ಮಕ ಬ್ಯಾಡ್ಮಿಂಟನ್ ಆಟದ ಪಯಣ ಈಗ ಮಹತ್ವದ ಮೈಲುಗಲ್ಲು ಮುಟ್ಟಿದೆ. ಜಕಾರ್ತದಲ್ಲಿ ನಡೆದ ಇಂಡೋನೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿಯಲ್ಲಿ ಸಿಂಧು ಡೆನ್ಮಾರ್ಕ್‌ನ ಲಿನ್ ಹೊಯ್ಮಾರ್ಕ್ ಜೇರ್‌ಫೆಲ್ಟ್ ಎದುರು ಗೆಲ್ಲುವ ಮೂಲಕ ವೃತ್ತಿ ಬದುಕಿನ 500ನೇ ಪಂದ್ಯದ ಗೆಲುವು ಸಾಧಿಸಿದರು. ಸಿಂಗಲ್ಸ್ ವಿಭಾಗದಲ್ಲಿ ಇಂಥ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎನ್ನುವ ಹೆಗ್ಗಳಿಕೆ ಪಡೆದುಕೊಂಡಿದ್ದಾರೆ.

ಅಂಬುಜಾ ಸಿಮೆಂಟ್ ಆಲ್ ಇಂಡಿಯಾ ರ‍್ಯಾಂಕಿಂಗ್, 13 ವರ್ಷದ ಒಳಗಿನವರ ವಿಭಾಗ, ಸಬ್ ಜೂನಿಯರ್ ನ್ಯಾಷನಲ್, ಅಖಿಲ ಭಾರತ ರ‍್ಯಾಂಕಿಂಗ್ ಹೀಗೆ ಅನೇಕ ಟೂರ್ನಿಗಳಲ್ಲಿ ಪ್ರಶಸ್ತಿಗಳನ್ನು ಜಯಿಸಿದರು. 51ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 14 ವರ್ಷದ ಒಳಗಿನವರ ತಂಡ ವಿಭಾಗದಲ್ಲಿ ಚಿನ್ನದ ಒಡತಿಯಾದರು.

ಸ್ಥಿರ ಪ್ರದರ್ಶನ, ನಿರಂತರವಾಗಿ ಫಿಟ್‌ನೆಸ್ ಕಾಯ್ದುಕೊಳ್ಳಲು ಕೊಟ್ಟ ಒತ್ತು, ಸದಾ ಅಭ್ಯಾಸ, ಕಠಿಣ ಪರಿಶ್ರಮ ಮತ್ತು ಸದಾ ಗೆಲುವಿನ ತುಡಿತದ ಆಸೆಯಿಂದಾಗಿ ಸಿಂಧು ದೇಶೀ ಟೂರ್ನಿಗಳಲ್ಲಿ ಗಮನಸೆಳೆದಿದ್ದರಿಂದ ತಮ್ಮ 14ನೇ ವಯಸ್ಸಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಟೂರ್ನಿಯಲ್ಲಿ ದೇಶವನ್ನು ಪ್ರತಿನಿಧಿಸುವ ಅವಕಾಶ ಪಡೆದರು. 2009ರಲ್ಲಿ ಶ್ರೀಲಂಕಾದ ಕೊಲಂಬೊದಲ್ಲಿ ನಡೆದ ಸಬ್ ಜೂನಿಯರ್ ಏಷ್ಯನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಎರಡು ವರ್ಷಗಳ ತರುವಾಯ ಮಾಲ್ದೀವ್ಸ್ ಅಂತರರಾಷ್ಟ್ರೀಯ ಚಾಲೆಂಜ್, ಕಾಮನ್‌ವೆಲ್ತ್ ಯೂತ್ ಕ್ರೀಡಾಕೂಟ ಹೀಗೆ ಅನೇಕ ಟೂರ್ನಿಗಳಲ್ಲಿ ಪ್ರಶಸ್ತಿಯ ಒಡತಿಯಾದರು.

ದಶಕದ ಹಿಂದೆ ಒಂದೆಡೆ ಸೈನಾ ನೆಹ್ವಾಲ್ ಭಾರತದ ಬ್ಯಾಡ್ಮಿಂಟನ್ ಲೋಕದಲ್ಲಿ ತಾರೆಯಾಗಿ ಮಿಂಚುತ್ತಿದ್ದರೆ, ಸೈನಾ ಸಾಧನೆಯನ್ನೂ ಮೀರಿಸುವಂತೆ ಸಿಂಧು ಕಠಿಣ ಎದುರಾಳಿಗಳ ವಿರುದ್ಧ ಗೆಲುವಿನ ಪತಾಕೆ ಹಾರಿಸುತ್ತಲೇ ಬಂದರು. 2012ರ ಒಲಿಂಪಿಕ್ಸ್‌ನಲ್ಲಿ ಸೈನಾ ಪದಕ ಗೆದ್ದ ಬಳಿಕ ಮುಂದಿನ ಒಲಿಂಪಿಕ್ ಕ್ರೀಡಾಕೂಟಗಳಲ್ಲಿ ಬ್ಯಾಡ್ಮಿಂಟನ್‌ನಲ್ಲಿ ಜನರ ಪದಕದ ನಿರೀಕ್ಷೆ ಬೆಳೆಯುತ್ತಲೇ ಹೋಯಿತು. 2016ರಲ್ಲಿ ಡಿಯೊ ಡಿ ಜನ್ವೆರೊದಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಸಿಂಧು ಬೆಳ್ಳಿ ಪದಕ ಪಡೆದುಕೊಂಡರು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆಲ್ಲುವ ಮೂಲಕ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಭಾರತದ ಮೊದಲ ಆಟಗಾರ್ತಿ ಎನ್ನುವ ಹೆಗ್ಗಳಿಕೆ ಪಡೆದುಕೊಂಡರು.

ಎರಡು ದಶಕಗಳಿಂದ ಸ್ಪರ್ಧಾತ್ಮಕ ಪಂದ್ಯಗಳನ್ನು ಆಡುತ್ತಿರುವ 30 ವರ್ಷದ ಸಿಂಧು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಂದು ಚಿನ್ನ, ಎರಡು ಬೆಳ್ಳಿ, ಎರಡು ಕಂಚು, ಉಬೇರ್ ಕಪ್ ಟೂರ್ನಿಯ ತಂಡ ವಿಭಾಗದಲ್ಲಿ ಒಂದು ಬೆಳ್ಳಿ, ಒಂದು ಕಂಚು, ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಎರಡು ಚಿನ್ನ, ಎರಡು ಬೆಳ್ಳಿ, ಒಂದು ಕಂಚು, ಏಷ್ಯನ್ ಕ್ರೀಡಾಕೂಟದಲ್ಲಿ ಎರಡು ಕಂಚು, ಏಷ್ಯನ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಸೌತ್ ಏಷ್ಯನ್ ಗೇಮ್ಸ್‌ನಲ್ಲಿ ಒಂದು ಚಿನ್ನ, ಒಂದು ಬೆಳ್ಳಿ ಹೀಗೆ ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಪದಕಗಳನ್ನು ಜಯಿಸಿದ್ದಾರೆ. ಅವರ ವೃತ್ತಿ ಬದುಕಿನ ಅಂತರರಾಷ್ಟ್ರೀಯ ಸಿಂಗಲ್ಸ್ ವಿಭಾಗದಲ್ಲಿ ಆಡಿದ ಒಟ್ಟು 732 ಪಂದ್ಯಗಳಲ್ಲಿ 500ರಲ್ಲಿ ಗೆಲುವು ಸಾಧಿಸಿದ್ದಾರೆ.

ಬಾಲ್ಯದಲ್ಲಿ ಆಡಲು ಆರಂಭಿಸಿದ ದಿನಗಳಿಂದ ಈಗಿನ ತನಕ ನಿರಂತರವಾಗಿ ಯಶಸ್ಸಿಗಾಗಿಯೇ, ಪ್ರತಿ ಪಂದ್ಯದ ಗೆಲುವಿಗಾಗಿಯೇ ಚಡಪಡಿಸುವ ಸಿಂಧು ಹಲವು ಪಂದ್ಯಗಳಲ್ಲಿ ಸೋತಿದ್ದರೂ ಸೋಲಿನ ಕಹಿಗಿಂತ ಗೆಲುವಿನ ಸಿಹಿ ಪ್ರಮಾಣವೇ ಹೆಚ್ಚಾಗಿದೆ. ಈ ಎಲ್ಲಾ ಸಾಧನೆಗಾಗಿ ಅರ್ಜುನ ಪ್ರಶಸ್ತಿ, ಪದ್ಮಶ್ರೀ, ಮೇಜರ್ ಧ್ಯಾನಚಂದ್ ಖೇಲ್‌ರತ್ನ ಪ್ರಶಸ್ತಿ, ಪದ್ಮಭೂಷಣ ಹೀಗೆ ಭಾರತದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಇವೆಲ್ಲವೂ ಸಿಂಧು ಬದುಕಿನ ವೈಯಕ್ತಿಕ ಸಾಧನೆಗಳಾದರೆ, ಅವರು ರೋಚಕ ಘಟ್ಟದ ಪಂದ್ಯಗಳಲ್ಲಿ ಗೆದ್ದ ಬಳಿಕ ಎದುರಾಳಿ ಆಟಗಾರ್ತಿಯ ಜೊತೆ ನಡೆದುಕೊಳ್ಳುತ್ತಿದ್ದ ಕ್ರೀಡಾಸ್ಫೂರ್ತಿಯ ನಡೆ ಮಾದರಿಯಾಗಿದೆ. ಸೈನಾ ನೆಹ್ವಾಲ್ ಹಾಗೂ ಸಿಂಧು ಒಲಿಂಪಿಕ್ಸ್ ಸೇರಿದಂತೆ ದೊಡ್ಡ ಕ್ರೀಡಾಕೂಟಗಳಲ್ಲಿ ಪದಕ ಗೆದ್ದ ಬಳಿಕ ಭಾರತದಲ್ಲಿ ಈ ಕ್ರೀಡೆಯಲ್ಲಿ ಹೊಸ ಕ್ರಾಂತಿಯೇ ಆಗಿದೆ. ಅನೇಕ ಹೆಣ್ಣುಮಕ್ಕಳು ಹಾಗೂ ಅವರ ಪೋಷಕರ ಕಂಗಳಲ್ಲಿ ತಮ್ಮ ಮನೆಯ ಮಕ್ಕಳು ಕೂಡ ಬ್ಯಾಡ್ಮಿಂಟನ್‌ನಲ್ಲಿ ಸಾಧನೆ ಮಾಡಬೇಕು ಎನ್ನುವ ಆಸೆ ಮೂಡಿದ್ದು ಹೊಸ ವಿಷಯವೇನಲ್ಲ. ಭಾರತದ ಈ ಇಬ್ಬರು ತಾರಾ ಆಟಗಾರ್ತಿಯರ ಸಾಧನೆ ಅನೇಕರ ಬದುಕಿಗೆ ಪ್ರೇರಣೆಯಾಗಿದೆ. ಅದರಲ್ಲಿ ಸೈನಾ ನೆಹ್ವಾಲ್ ನಿವೃತ್ತಿ ಘೋಷಿಸಿದ್ದರೆ, ಸಿಂಧು ಮತ್ತಷ್ಟು ಟೂರ್ನಿಗಳಲ್ಲಿ ಸಾಧನೆಯ ಭರವಸೆ ಮೂಡಿಸಿದ್ದು @500 ಪಂದ್ಯಗಳ ಗೆಲುವಿನ ಕ್ಲಬ್ ಸೇರಿದ್ದಾರೆ. ■